ಅದು ಸದಾ ಅವರ ಸಹವಾಸದಲ್ಲಿ ಅವರ ಮಟ್ಟಕ್ಕಿಳಿದಾಗ ಮಾತ್ರ ಅರಿಯಲು ಸಾಧ್ಯ. ನಾವು ನಮ್ಮ ಬಾಲ್ಯಕ್ಕೆ ಹೊರಳಿ ಏನೇ ಬರೆದರೂ ನಮ್ಮ ಬಾಲ್ಯದ ಅನುಭವವೇ ಹೊರತು, ಅವರದ್ದಲ್ಲ. ಅದು ನಮಗೆ ಹಿಡಿಸಿದಷ್ಟು, ಕಾಡಿದಷ್ಟು ಅವರಿಗೆ ಹಿಡಿಸಲಿಕ್ಕಿಲ್ಲ, ಕಾಡಲಿಕ್ಕಿಲ್ಲ. ಆಯಾ ಕಾಲದಂತೆ ಪ್ರತಿಯೊಬ್ಬರ ಬಾಲ್ಯದ ಅನುಭವಗಳು ವಿಭಿನ್ನವಾಗಿರುತ್ತವೆ. ಹೀಗಾಗಿ ಸಾಹಿತಿಗಳು ಬರೆದದ್ದನ್ನು ಮಕ್ಕಳ ಎದುರಿಗೆ ಪ್ರಸ್ತುತ ಪಡಿಸುವ ಪ್ರಯೋಗಗಳಾಗಬೇಕು. ಬರೆದದ್ದು ಮಕ್ಕಳೆದೆಗೆ ಇಳಿಸಲು ಸಾಧ್ಯವೇ ಎಂಬ ಪರೀಕ್ಷೆ ನಡೆಯಬೇಕು. ತಮ್ಮ ಬೆನ್ನನ್ನು ತಾವೇ ಚಪ್ಪರಿಸಿಕೊಳ್ಳುವುದನ್ನು ಬಿಟ್ಟು ಮಕ್ಕಳಿಂದ ಪ್ರತಿಕ್ರಿಯೆ ಪಡೆಯಬೇಕು. ಅವು ಎಷ್ಟರಮಟ್ಟಿಗೆ ಅವರಿಗೆ ಮುಟ್ಟುತ್ತವೆ, ಅವರ ಮನ ತಟ್ಟುತ್ತವೆ, ಅವರನ್ನು ರಂಜಿಸುತ್ತವೆ ಅನ್ನುವುದರ ಪರಾಮರ್ಶೆ ಆಗಬೇಕು. ಇಂಥ ಪ್ರಯೋಗಗಳು ಮಕ್ಕಳ ಇಷ್ಟಾನಿಷ್ಟಗಳನ್ನು ಅರಿಯುವಲ್ಲಿ ಸಹಕಾರಿಯಾಗುತ್ತವೆ. ಈಗ ಕನ್ನಡದಲ್ಲಿ ಇಂಥ ಪ್ರಯತ್ನಗಳು ನಡೆಯುತ್ತಿವೆ. ಆನಂದ ಪಾಟೀಲರನ್ನು ಒಳಗೊಂಡ 'ಸಂಧ್ಯಾ ಸಾಹಿತ್ಯ ವೇದಿಕೆ', ಧಾರವಾಡದ 'ಮಕ್ಕಳ ಸಾಹಿತ್ಯಾಸಕ್ತರ ಬಳಗ' ಈ ದಿಶೆಯಲ್ಲಿ ಸದ್ದಿಲ್ಲದೇ ಸಕ್ರಿಯವಾಗಿದೆ.

## 6

ಸೃಷ್ಟಿಯಲ್ಲಿ ಇದು ದೊಡ್ಡವರಿಗಾಗಿ ಇದು ಮಕ್ಕಳಿಗಾಗಿ ಎಂದು ಯಾವುದೂ ಮೈದಳೆದಿಲ್ಲ. ಹುಟ್ಟಿದ್ದೆಲ್ಲವೂ ಸಹಜವಾಗಿಯೇ. ಹಾಗೆ ನೋಡಿದರೆ ಯಾರೂ ಇದು ಮಕ್ಕಳಿಗಾಗಿ, ಇದು ದೊಡ್ಡವರಿಗಾಗಿ ಅಂತ ಬರೆಯಲೇಬಾರದು. ಎಲ್ಲರೂ ಬರೆಯುವ ಹಾಗೆಯೇ ಬರೆಯಬೇಕು. ಬರೆದದ್ದು ಮಕ್ಕಳಿಗೆ ಇಷ್ಟವಾದರೆ ಅದು ಮಕ್ಕಳದ್ದು, ದೊಡ್ಡವರಿಗೆ ಇಷ್ಟವಾದರೆ ಅದು ದೊಡ್ಡವರದ್ದು ಎನ್ನುವ ತರ್ಕ ನನ್ನದು. ಇಬ್ಬರಿಗೂ ಇಷ್ಟವಾದರೆ ಅದು ಇಬ್ಬರದ್ದೂ ಕೂಡ. ನಾನು ಬರೆದದ್ದು ಮಕ್ಕಳಿಗೆ ಇಷ್ಟವಾಗತೊಡಗಿತು. ಹಾಗಾಗಿ ಅದು ಮಕ್ಕಳ ಸಾಹಿತ್ಯವಾಗತೊಡಗಿತು. ಹೀಗಾಗಿ ದೊಡ್ಡವರಿಗಾಗಿ ಬರೆಯಬೇಕಿತ್ತೆ? ಎಂಬ ಪ್ರಶ್ನೆ ನನಗೆ ಕಾಡಲಿಲ್ಲ. ದೊಡ್ಡವರಿಗೆ ಇಷ್ಟವಾಗುವ ಒಂದಿಷ್ಟು ಕಥೆ ಕವನಗಳನ್ನು ಬರೆದರೂ ಅವುಗಳನ್ನು ಪ್ರಕಟಿಸುವ ಗೋಜಿಗೆ ಹೋಗಲಿಲ್ಲ. ನಿಜ ಹೇಳಬೇಕೆಂದರೆ ಮಕ್ಕಳಿಗಾಗಿ ಬರೆಯುವುದರಲ್ಲಿ ನನಗೆ ತೃಪ್ತಿ ಇದೆ.

## 7

ಮಕ್ಕಳ ಸಾಹಿತ್ಯ ರಚನೆ ಮಾಡುವವರಿಗೆ ಕಾಗೆ–ಗುಬ್ಬಿ ಕತೆ ಬರೆಯುವವರು ಎಂಬ ಪ್ರಶಂಸೆಯೊಂದು ಸಾಮಾನ್ಯವಾಗಿದೆ. ಅಂಥ ಪ್ರಶಂಸೆಗಳಿಗೆ ಮಕ್ಕಳ ಸಾಹಿತಿಗಳು ಜಾಣ ಕಿವುಡರಾಗಿರಬೇಕು. ಮಕ್ಕಳ ಸಾಹಿತ್ಯವಂತೂ ವಿಮರ್ಶೆಗೆ ಒಳಪಡುವುದೇ ಇಲ್ಲ. ವಿಮರ್ಶೆ ಒತ್ತಟ್ಟಿಗಿರಲಿ, ಕೈಗೆತ್ತಿಕೊಂಡು ನೋಡುವ ಆಸಕ್ತಿ–ಮನಸ್ಸೂ ವಿಮರ್ಶಕರಿಗಿಲ್ಲ. ಮಕ್ಕಳ ಸಾಹಿತ್ಯವನ್ನು ಹಗುರವಾಗಿ ಕಾಣುವ ಜಾಯಮಾನ ಇರುವಾಗ ಪ್ರಶಂಸೆ ಎಲ್ಲಿಂದ ನಿರೀಕ್ಷಿಸುವುದು? ಆದರೂ ಒಂದು ಪ್ರಸಂಗವನ್ನು ಹಂಚಿಕೊಳ್ಳಲು ಬಯಸುವೆ.

1988ರಲ್ಲಿ ಧಾರವಾಡದಲ್ಲಿ ಮಕ್ಕಳ ಸಾಹಿತ್ಯ ಕಮ್ಮಟವೊಂದು ನಡೆದಿತ್ತು. ಸುಮಾರು ನಲವತ್ತಕ್ಕೂ ಹೆಚ್ಚು ಶಿಬಿರಾರ್ಥಿಗಳಲ್ಲಿ ನಾನೂ ಒಬ್ಬನಾಗಿ ಭಾಗವಹಿಸಿದ್ದೆ. ಚೆನ್ನವೀರ ಕಣವಿ, ರಾಜಶೇಖರ ಭೂಸನೂರಮಠ, ಸಿಸು ಸಂಗಮೇಶ, ಶಂ.ಗು. ಬಿರಾದಾರ ಅವರನ್ನು ಒಳಗೊಂಡಂತೆ ಸಾಕಷ್ಟು ಹಿರಿಯರು ಸಂಪನ್ಮೂಲ ವ್ಯಕ್ತಿಗಳಾಗಿದ್ದರು. ಕಮ್ಮಟದ ಒಂದು ದಿನ ಗಿರಡ್ಡಿ ಗೋವಿಂದರಾಜ ಅವರು ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದರು. ಮಧ್ಯಾಹ್ನದ ಊಟದ ಸಮಯದಲ್ಲಿ ಅವರ ಸಹಜ ಭೇಟಿಯಾಯಿತು. ಪರಿಚಯಿಸಿಕೊಂಡೆ. ಅವರೇನು ಅರ್ಥಮಾಡಿಕೊಂಡರೋ. ನನ್ನ ಎಳೆಯ ವಯಸ್ಸು ನೋಡಿ ಅವರು, 'ಓಹ್! ಕುಕ್ಕುಂದಾ! ನಿಮ್ಮ ತಂದೆಯವರೇಕೆ ಬರಲಿಲ್ಲ' ಅಂದರು. 'ಸರ್, ಪದ್ಯ ಬರೆಯುವವನು ನಾನು. ನನ್ನ ತಂದೆಯವರಲ್ಲ' ಎಂದೆ. ಅವರಿಗೆ ಬಹಳ ಖುಷಿಯಾಯಿತು. 'ಪತ್ರಿಕೆಯಲ್ಲಿ ನಿನ್ನ ಪದ್ಯಗಳನ್ನು ನೋಡಿ, ನೀನು ಬಹಳ ದೊಡ್ಡವನಿರಬೇಕು ಅಂದುಕೊಂಡಿದ್ದೆ!' ಎಂದರು. ಆಗ ಅವರು ದೊಡ್ಡ ವಿಮರ್ಶಕರೆಂಬುದು ನನಗೆ ತಿಳಿದಿರಲೂ ಇಲ್ಲ. ಅವರ ಮಾತಿನಿಂದ ನನಗೆ ನನ್ನ ಮೇಲೆ, ನನ್ನ ಬರವಣಿಗೆಯ ಮೇಲೆ ವಿಶ್ವಾಸ ಮೂಡುವಂತಾಯಿತು. ನೀವೇ ಹೇಳಿ, ಒಬ್ಬ ಲೇಖಕನಿಗೆ ಇದಕ್ಕಿಂತ ಅತ್ಯುತ್ತಮ ಪ್ರಶಂಸೆ ಇನ್ನೇನು ಬೇಕು? ●